(6ನೇ ಪುಟದಿಂದ)

ಏರುದಾರಿಯನ್ನು ಹತ್ತಬೇಕು. ಆಯ ತಪ್ಪಿದಂತೆ ಎಚ್ಚರವಹಿಸಿ ಪ್ರಕೃತಿಯ ಅಂದವನ್ನು ಸವಿಯಬಹುದು. ಜೀರುಂಡೆಗಳ ಝೇಂಕಾರ, ಹಕ್ಕಿಗಳ ಚಿಲಿಪಿಲಿಯೊಂದಿಗೆ ಕಾನನದಲ್ಲಿ ಸಾಗುವ ಗಮ್ಮತ್ತೇ ಬೇರೆ.

ಮಳೆಗಾಲದಲ್ಲಿ ತೊರೆಯ ಹರಿವು ತುಂಬಾ ಹೆಚ್ಚಿರುತ್ತದೆ; ಜತೆಗೆ ಜಿಗಣೆಗಳ ಕಾಟವೂ ಸಹಿಸಲಾಗದಷ್ಟು. ವರ್ಷ ಪೂರ್ತಿ ಈ ಜಲಪಾತದಲ್ಲಿ ನೀರಿರುತ್ತದೆ. ಆದರೂ ಅಕ್ಟೋಬರ್ ತಿಂಗಳ ಬಳಿಕ ಇಲ್ಲಿಗೆ ಭೇಟಿ ಕೊಡಲು ಸೂಕ್ತ ಸಮಯ. ಬಳಿಕ ನೀರಿನ ರಭಸವೂ ಕಡಿಮೆಯಾಗುತ್ತದೆ.

ಸುಮಾರು ಏಳೆಂಟು ಕಿ.ಮೀ ಕಾನನದಲ್ಲಿ ನಡೆದ ಬಳಿಕ ಹುಲ್ಲಿನ ಬೆಟ್ಟ ಕಾಣುತ್ತದೆ. ಜಲಪಾತವು ಕಣ್ಣೆದುರಾಗಲು ಈ ಹುಲ್ಲುಗಾವಲು ತಲುಪಬೇಕು. ಈ ಬೆಟ್ಟದಲ್ಲಿ ಸ್ವಲ್ಪ ಮುಂದೆ ಹೋದರೆ ಬಂಡಾಜೆ ಜಲಪಾತದ ತುತ್ತ ತುದಿ ತಲುಪಬಹುದು. ಜಲಪಾತದ ಮೇಲಿನಿಂದ ನೀರು ಬೀಳುವ ಸೌಂದರ್ಯವನ್ನು ಕೆಳಕ್ಕೆ ಇಣುಕಿ ನೋಡಬಹುದು. ಪ್ರಪಾತ ದರ್ಶನ ಭಾಗ್ಯವಾಗುವಾಗ ಅಷ್ಟೇ ಜಾಗರೂಕತೆ ಅಗತ್ಯ.

ಸುಮಾರು 300 ಮೀಟರ್ ಎತ್ತರದಿಂದ ನೀರು ಹಂತಹಂತವಾಗಿ ಕೆಳಕ್ಕೆ ಬೀಳುತ್ತದೆ. ಮೇಲಿನಿಂದ ನೋಡುವಾಗ ಒಂದು ಹಂತವಷ್ಟೇ ಕಾಣುತ್ತದೆ. ಮತ್ತೆ 5 ಕಿ.ಮೀ ಕ್ರಮಿಸಿದರೆ ಬಲ್ಲಾಳರಾಯನ ದುರ್ಗ ಕೋಟೆಯನ್ನೂ ನೋಡಬಹುದು. ಗೌಡರ ಮನೆಯಿಂದ ಜಲಪಾತ ತಲುಪಲು 10 ಕಿ.ಮೀ ಚಾರಣ ಮಾಡಬೇಕು. ಅಂದರೆ ಸುಮಾರು ಏಳೆಂಟು ಗಂಟೆಯ ಟ್ರೆಕ್ಕಿಂಗ್!

ಇಲ್ಲಿನ ಸೂರ್ಯಾಸ್ತದ ಸೊಬಗೂ ವೈಭವದ್ದೇ. ಜಲಪಾತವಿರುವ ಬೆಟ್ಟದಲ್ಲಿಯೇ ರಾತ್ರಿ ಕಳೆಯುವುದು ಸೂಕ್ತ. ಕ್ಯಾಂಪ್ ಫಯರ್ ಇತ್ಯಾದಿ ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಬೇಕು. ಬೇಸಿಗೆಯಲ್ಲೂ ಇಲ್ಲಿನ ನೀರು ಮೈ ಮರಗಟ್ಟುವಷ್ಟು ತಂಪಿರುತ್ತದೆ. ಅತ್ಯಂತ ಕಷ್ಟಕರ ಚಾರಣ ಪ್ರದೇಶ ಎಂದು ಹೆಸರಾಗಿರುವ ಇಲ್ಲಿಗೆ ಹೋಗುವುದು ಖಂಡಿತಾ ಒಂದು ಚಾಲೆಂಜ್.



